*(ದಿನಾಂಕಃ **11/12/2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)*

**<u>ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –</u>**

8. ಆರೋಪಿ ಮನೆಯಲ್ಲಿ ಹಾಜರಿದ್ದ ಹೆಂಗಸರ ಮತ್ತು ಗಂಡಸರ ಅಂಗಶೋಧನೆ ಮಾಡಲಾಯಿತು. ಹೆಂಗಸರ ಅಂಗಶೋಧನೆ ಹೆಂಗಸರ ಮೂಲಕ ಮತ್ತು ಗಂಡಸರ ಅಂಗಶೋಧನೆ ಗಂಡಸರ ಮೂಲಕ ಮಾಡಿಸಲಾಯಿತು. ರೂ.3,15,000/- ಹಾಗೂ ಮೊಬೈಲುಗಳು ಸಿಕ್ಕವು. ಅವುಗಳ ಮೌಲ್ಯಮಾಪನ ಮಾಡಿ ಜಪ್ತಿಮಾಡಲಾಯಿತು. ನನ್ನ ಸಹಿ ಪಡೆಯಲಾಯಿತು. ಬೆಳಿಗ್ಗೆ 6.00 ಘಂಟೆಯಿಂದ ರಾತ್ರಿ 8.00 ಘಂಟೆಯವರೆಗೆ ಶೋಧನೆ ನಡೆಯಿತು.

9. ದಿನಾಂಕಃ23/03/2013 ರಂದು ಹಾವೇರಿಯ ಕನಕಾಪುರ ರಸ್ತೆಯಲ್ಲಿರುವ ಆರೋಪಿಯ ಜಮೀನು ಮತ್ತು ತೋಟದ ಮನೆಗೆ ಹೋದೆವು. ಅಲ್ಲಿ ಒಂದು ಟ್ರ್ಯಾಕ್ಟರ, ಒಂದು ಸ್ಕೂಟಿ, ಒಂದು ಡಾಬರಮನ್ ನಾಯಿ, ಕೃಷಿ ಸಲಕರಣೆಗಳು, ಗೋವಿನಜೋಳ ಕಟಾವು ಮಾಡಲಾಗಿತ್ತು. ಕಬ್ಬಿನ ಬೆಳೆ ಇತ್ತು. ಆ ಬಗ್ಗೆ ವಿಡಿಯೋ ಮಾಡಲಾಯಿತು. ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಪಂಚನಾಮೆಯನ್ನು ಈಗ ನಿಪಿ-5, ನನ್ನ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

*(ಈ ಹಂತದಲ್ಲಿ ಜಪ್ತಿಮಾಡಲಾದ ಸ್ವತ್ತು ತರಿಸುವ ಕುರಿತು ಮಾನ್ಯ ಪಿ.ಪಿ.ರವರ ವಿನಂತಿ ಮೇರೆಗೆ ಮುಂದೂಡಲಾಯಿತು.)*

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.

*(ದಿನಾಂಕಃ **11/12/2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)*

**<u>ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –</u>**

10. ಈಗ ತೋರಿಸಿದ 3 ಬಂಗಾರದ ಆಭರಣಗಳು, 19 ಬೆಳ್ಳಿ ಆಭರಣ ಮತ್ತು ಸಾಮಾನುಗಳು ಹಾಗೂ 13 ಬಂಗಾರದ ಆಭರಣಗಳು ಆ ದಿನ ಜಪ್ತಿಮಾಡಿದ್ದುವೇ ಇರುತ್ತವೆ. 3 ಬಂಗಾರದ ಆಭರಣಗಳನ್ನು ಮುಮಾ-3, 19 ಬೆಳ್ಳಿ ಆಭರಣ ಮತ್ತು ಸಾಮಾನುಗಳನ್ನು ಮುಮಾ-4

ಹಾಗೂ 13 ಬಂಗಾರದ ಆಭರಣಗಳನ್ನು ಮುಮಾ-5 ಎಂದು ಗುರುತಿಸಲಾಯಿತು (ದೋಷಾರೋಪಣಾ ಪತ್ರದ ಕಾಲಂ. ನಂ.*11*ರ ಬರವಣಿಗೆ ಹಾಳೆಯಲ್ಲಿ ಎ, ಬಿ, ಸಿ ಎಂದು ಸ್ವತ್ತುಗಳನ್ನು ವಿವರಿಸಲಾಗಿದೆ.)

**ಪಾಟೀ ಸವಾಲು ಆರೋಪಿ ಪರ ಶ್ರೀ ಯು.ಎನ್.ಜಿ. ವಕೀಲರಿಂದಃ–**

11. ಪ್ರಕರಣದಲ್ಲಿ ಪಂಚಳಾಗುವಂತೆ ನನಗೆ ನೋಟೀಸು ನೀಡಲಾಗಿತ್ತು. ಆ ಬಗ್ಗೆ ತಹಶೀಲ್ದಾರರು ನನಗೆ ಲಿಖಿತ ನಿರ್ದೇಶನ ನೀಡಿದರು. ನೋಟೀಸು ದಿನಾಂಕಃ21/03/2013 ರಂದು ಬಂದಿತ್ತು. ಮರುದಿನ ಪೊಲೀಸ ಠಾಣೆಗೆ ಹೋಗಿ ಪೊಲೀಸರ ಸೂಚನೆ ಪಾಲಿಸುವಂತೆ ತಿಳಿಸಿದರು. ನನ್ನನ್ನು ಕರೆಯಲು ಪೊಲೀಸರು ಬರಲಿಲ್ಲ. ನಾನು ಠಾಣೆಗೆ ಹೋದಾಗ ಮಧ್ಯಾಹ್ನ 3.00 ಘಂಟೆಯಾಗಿತ್ತು. ಸಂಜೆ 5.30 ರವರೆಗೆ ನಾನು ಠಾಣೆಯಲ್ಲಿ ಇದ್ದೆ. ಮರುದಿನ ಬರಲು ತಿಳಿಸುವುದಾಗಿ ಹೇಳಿ ಕಳಿಸಿದರು.

12. ಪುನಃ ಪೊಲೀಸ ಠಾಣೆಗೆ ಹೋಗಲು ನಾನು ಮೇಲಾಧಿಕಾರಿ ಪರವಾನಿಗೆ ಪಡೆಯಲಿಲ್ಲ. ಮುಂಚೆಯೇ ಕೊಟ್ಟಿದ್ದರು. ಆರೋಪಿ ಮನೆ ಇರುವ ಪ್ರದೇಶ ನನಗೆ ವೈಯಕ್ತಿಕವಾಗಿ ಗೊತ್ತಿರಲಿಲ್ಲ. ಆರೋಪಿ ಮನೆಗೆ ಪೊಲೀಸರು ನನ್ನನ್ನು ಕರೆದುಕೊಂಡು ಹೋಗುವ ಮುಂಚೆ ನಾನು ಯಾವುದೇ ದಾಖಲೆಗೆ ಸಹಿ ಮಾಡಿಲ್ಲ.

13. ಆರೋಪಿ ಮನೆಯ ಚೆಕ್ಕುಬಂದಿ ಗೊತ್ತಿಲ್ಲ. ನಿಪಿ-4 ಮತ್ತು 5 ಪಂಚನಾಮೆಗಳನ್ನು ಬರೆಯಲು ನಾನು ಉಕ್ತಲೇಖನ ನೀಡಿಲ್ಲ. ಸದರಿ ಪಂಚನಾಮೆಗಳಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎನ್ನುವುದು ಸುಳ್ಳು. ಸಹಿಗಳನ್ನು ನಾನು ಲೋಕಾಯುಕ್ತ ಪೊಲೀಸ ಠಾಣೆಯಲ್ಲಿ ಮಾಡಿದ್ದೇನೆ ಎನ್ನುವುದು ಸುಳ್ಳು. ಪಂಚನಾಮೆಯಲ್ಲಿ ನಮೂದಿಸಿದ ವಸ್ತುಗಳನ್ನು ಯಾವಾಗ, ಎಲ್ಲಿ, ಹೇಗೆ ಖರೀದಿ ಮಾಡಲಾಯಿತು ಎಂದು ಹೇಳಲು ಬರುವುದಿಲ್ಲ. ಬೆಳ್ಳಿ ಮತ್ತು ಬಂಗಾರದ ಆಭರಣಗಳನ್ನು ಯಾವಾಗ ಖರೀದಿಸಲಾಯಿತು ಹಾಗೂ ಯಾರು, ಯಾವಾಗ ಉಡುಗೊರೆಯಾಗಿ ಕೊಟ್ಟರು ಎಂದು ಹೇಳಲು ಬರುವುದಿಲ್ಲ.

14. ನಾನು ಪಂಚಳಾಗಿ ಒಟ್ಟು 3 ದಾಳಿ ಪ್ರಕರಣಗಳಲ್ಲಿ ಹಾಜರಾಗಿದ್ದೇನೆ. ಪಂಚನಾಮೆ ಗಳಲ್ಲಿ ಬರೆದ ಮೌಲ್ಯದ ಕುರಿತು ನನಗೆ ವಿಶೇಷ ತರಬೇತಿ ಆಗಿಲ್ಲ. ರೈತರು ತಮ್ಮ ಜಮೀನಿನಲ್ಲಿ ಬೆಳೆದ ದವಸ ಧಾನ್ಯಗಳನ್ನು ಉಪಯೋಗಿಸುತ್ತಾರೆ ಎನ್ನುವುದು ನಿಜ. ಪಂಚನಾಮೆಯಲ್ಲಿ ನಮೂದಿಸಿದ ಸ್ವತ್ತು ಬೇರೆಯವರಿಗೂ ಸಹ ಸೇರಿವೆ ಎನ್ನುವುದು ಗೊತ್ತಿಲ್ಲ. ದಾಳಿ ದಿನಾಂಕದಂದು ಇದ್ದ ಮೌಲ್ಯ ಪರಿಗಣಿಸಲಾಗಿದೆ ಎನ್ನುವುದು ನಿಜ. ಪಂಚನಾಮೆಗಳಲ್ಲಿ ಬರೆದ ಮೌಲ್ಯವನ್ನು ಪೊಲೀಸರು ನಿರ್ಧರಿಸಿದ್ದಾರೆ ಎನ್ನುವುದು ನಿಜ. ಪೊಲೀಸರು ಹೇಳಿದ ಪಂಚನಾಮೆಗಳಿಗೆ ಸಹಿ ಮಾಡಿದ್ದೇನೆ ಎನ್ನುವುದು ನಿಜ.

15. ವಾಹನ, ಕಂಪ್ಯೂಟರ ಮತ್ತು ಇತರ ಎಲೆಕ್ಟ್ರಾನಿಕ್ ಹಾಗೂ ಎಲೆಕ್ಟ್ರಿಕಲ್ ವಸ್ತುಗಳನ್ನು ಯಾವಾಗ ಮತ್ತು ಎಲ್ಲಿ ಖರೀದಿಸಲಾಗಿದೆ ಎನ್ನುವುದು ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ಫೋಟೋ ಪಡೆಯಲಾಯಿತು ಹಾಗೂ ವಿಡಿಯೋ ಮಾಡಿಸಲಾಯಿತು.

16. ನಾನು ಪಂಚನಾಮೆಯನ್ನು ಹೊರತುಪಡಿಸಿ ಇತರ ದಾಖಲೆಗಳಿಗೆ ಸಹಿ ಮಾಡಿಲ್ಲ. ನಮ್ಮೊಂದಿಗೆ ಮಹಿಳಾ ಪೊಲೀಸ ಬಂದಿರಲಿಲ್ಲ. ತೋಟದಲ್ಲಿ ಜಪ್ತಿಮಾಡಲಾದ ವಸ್ತುಗಳ ನಿಖರವಾದ ಬೆಲೆ ಹೇಳಲು ಬರುವುದಿಲ್ಲ. ಪೊಲೀಸರೇ ಮೌಲ್ಯ ನಮೂದಿಸಿದ್ದಾರೆ. ಆಗ ನೋಡಿದ ಟ್ರ್ಯಾಕ್ಟರ ಮತ್ತು ಇತರ ವಾಹನಗಳ ಕಂಪನಿ ಇತ್ಯಾದಿ ಹೆಸರು ಗೊತ್ತಿಲ್ಲ. ತೋಟದ ಮನೆಯ ಚೆಕ್ಕುಬಂದಿ ಗೊತ್ತಿಲ್ಲ.

17. ದಿನಾಂಕ:21/03/2013 ರಂದು ನನ್ನನ್ನು ಪಂಚನಾಮೆ ಕುರಿತು ಲೋಕಾಯುಕ್ತ ಠಾಣೆಗೆ ಹೋಗುವಂತೆ ನನ್ನ ಮೇಲಾಧಿಕಾರಿ ತಿಳಿಸಿಲ್ಲ ಎನ್ನುವುದು ಸುಳ್ಳು.

18. ಮರುದಿನ ನಾನು ಪಂಚನಾಮೆ ಕುರಿತು ಹೋಗಿಲ್ಲ ಮತ್ತು ದಾಳಿ ನಡೆಸಿಲ್ಲ ಎನ್ನುವುದು ಸುಳ್ಳು. ಬಟ್ಟೆ, ಪೀಠೋಪಕರಣ, ಬಂಗಾರ, ಬೆಳ್ಳಿ, ವಾಹನ, ಕಂಪ್ಯೂಟರ ಮತ್ತು ಆಸ್ತಿಗಳ ಮೌಲ್ಯ ನಿರ್ಧಾರ ಮಾಡಿಲ್ಲ ಎನ್ನುವುದು ಸುಳ್ಳು. ಪೊಲೀಸರು ಪಂಚನಾಮೆ ತಯರಿಸಿಲ್ಲ ಎನ್ನುವುದು ಸುಳ್ಳು. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಜಪ್ತಿ ಮಾಡಿಲ್ಲ ಎನ್ನುವುದು ಸುಳ್ಳು. ಆರೋಪಿಯ ಮನೆಯಲ್ಲಿ ಹಾಜರಿದ್ದವರ ಅಂಗಶೋಧನೆ ಮಾಡಿಲ್ಲ, ಅವರ ಹತ್ತಿರ ಹಣ ಮತ್ತು ಮೊಬೈಲ್ ಸಿಕ್ಕಿಲ್ಲ ಎನ್ನುವುದು ಸುಳ್ಳು.

18. ದಿನಾಂಕ:23/03/2013 ರಂದು ನಾನು ಪಂಚನಾಮೆ ಕುರಿತು ಹೋಗಿಲ್ಲ ಮತ್ತು ದಾಳಿ ನಡೆಸಿಲ್ಲ ಎನ್ನುವುದು ಸುಳ್ಳು. ವಾಹನ, ದವಸಧಾನ್ಯ, ಇತ್ಯಾದಿಗಳ ಮೌಲ್ಯ ನಿರ್ಧಾರ ಮಾಡಿಲ್ಲ ಮತ್ತು ಅವುಗಳನ್ನು ಜಪ್ತಿಮಾಡಿಲ್ಲ ಎನ್ನುವುದು ಸುಳ್ಳು. ಪೊಲೀಸರು ಪಂಚನಾಮೆ ತಯ ರಿಸಿಲ್ಲ ಎನ್ನುವುದು ಸುಳ್ಳು. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಜಪ್ತಿ ಮಾಡಿಲ್ಲ ಎನ್ನುವುದು ಸುಳ್ಳು. ನಿಪಿ-4 ಮತ್ತು 5 ನ್ನು ನನ್ನ ಸಮಕ್ಷಮ ತಯಾರಿಸಿಲ್ಲವಾದರೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**<u>ಮರು ವಿಚಾರಣೆ:</u>** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.